ಶ್ರೀ ಎಂ. ರಘುಪತಿ.—ನನಗೆ ಇಲ್ಲ. ಪುಸ್ತಕಗಳನ್ನು ೨೦ ಲಕ್ಷ ವಿದ್ಯಾರ್ಥಿಗಳು ಕೊಂಡುಕೊಳ್ಳುತ್ತಾ ಇರಲಿಲ್ಲ ಎಂದು ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಆದರೆ ಯಾರಿಗೆ ಪುಸ್ತಕಗಳ ಜ್ಞಾನ ಇರಲಿಲ್ಲ ಅಂತಹವರಿಗೂ ಜ್ಞಾನವನ್ನು ಕೊಡಬೇಕು ಎಂದು ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಮಾನ್ಯ ಬಂಗಾರಪ್ಪನವರು ಹೇಳಿದಂತೆ ಜ್ಞಾನಾಭಿವೃದ್ಧಿಗೆ ಪುಸ್ತಕಗಳು ಬಹಳ ಅವಶ್ಯಕ. ಅದನ್ನು ಪೂರೈಸುತ್ತೇವೆ ಎಲ್ಲಾದರೂ ಲೋಪವಿದ್ದರೆ ಬರೆದು ಕಳಿಸಿ, ಎಲ್ಲಿ ಪುಸ್ತಕಗಳು ಇಲ್ಲ ಎಂದು ಹೇಳುತ್ತಾರೊ ಅಲ್ಲಿಗೆ ಪುಸ್ತಕಗಳನ್ನು ಪೂರೈಸುತ್ತೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಪರೀಕ್ಷೆ ಯಿಲ್ಲದೆ ಪಾಸಾಗುತ್ತಾರೆಂದು ಹೇಳುತ್ತಾರೆ. ಈ ವರ್ಷ ಏನಾ ತೊಂದರೆಯಾಗಿದೆ. ಆ ತೊಂದರೆ ಯನ್ನು ಬಗೆಹರಿಸಲಿಕ್ಕೆ ಎಲ್ಲಾ ಮಕ್ಕಳನ್ನು ಪಾಸ್ ಮಾಡಬೇಕೆಂದು ಎಲ್ಲಾ ಶಾಲೆಗಳಿಗೆ ಸರ್ಕ್ಯುಲರ್ ಕಳುಹಿಸಿಕೊಡಬೇಕು.

ಶ್ರೀ ಎಂ. ರಘುಪತಿ.—ಸರ್ಕ್ಯುಲರ್ ಅಲ್ಲ. ಅದು ಕೇಂದ್ರ ಸರ್ಕಾರದ ನೀತಿ. ಮಾನ್ಯ ಖಾರ್ಗೆಯವರು ಇದನ್ನು ತಿಳಿದುಕೊಂಡಿದ್ದಾರೆ. ಎಸ್.ಎಸ್.ಎಲ್.ಸಿ.ಯವರಿಗೆ ಮಾತ್ರ ಪಬ್ಲಿಕ್ ಎಕ್ಸಾಮಿನೇಷನ್ ನಡೆಯುತ್ತದೆ. ಒಂದರಿಂದ ೭ನೇ ತರಗತಿಯವರೆಗೆ ಕ್ಲಾಸ್ ಎಕ್ಸಾಮಿನೇಷನ್ ಇದೆ. ೧೫ನೇ ತರಗತಿಯವರೆಗೂ ಕಡ್ಡಾಯ ಶಿಕ್ಷಣ ಕೊಡಬೇಕೆಂದು ರಾಜ್ಯಾಂಗದಲ್ಲಿರುವ ಕಾರಣದಿಂದ ಪ್ರತಿ ಯೊಂದು ವಿದ್ಯಾರ್ಥಿಯನ್ನು ಮುಂದಿನ ತರಗತಿಗೆ ಪಾಸ್ ಮಾಡಿಕೊಂಡು ಹೋಗತಕ್ಕಂಥ ವ್ಯವಸ್ಥೆ ಈ ದೇಶದಲ್ಲಿ ನಡೆದಿದೆ. ಅದನ್ನು ಸಮರ್ಥನೆ ಮಾಡುವುದಕ್ಕೆ ನಾನು ನಿಂತಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾಮಂತ್ರಿಗಳು...

ಶ್ರೀ ಎಂ. ರಘುಪತಿ.—ಯಾವುದು ರಾಂಗ್ ಸ್ಟೇಟ್‌ಮೆಂಟ್ ಎಂದು ವಿದ್ಯಾ ಇಲಾಖೆಯ ಮೇಲಿನ ಬೇಡಿಕೆ ಬಂದಾಗ ಕೂಲಂಕುಷವಾಗಿ ಚರ್ಚೆ ಮಾಡೋಣ, ಆಗ ಅದಕ್ಕೆ ಸಂಬಂಧಪಟ್ಟ ಮಾಹಿತಿ ಒದಗಿ ಸುತ್ತೇನೆ. ಪ್ರತಿಯೊಂದು ತರಗತಿಯಲ್ಲೂ ಕಡ್ಡಾಯವಾಗಿ ಪಬ್ಲಿಕ್ ಪರೀಕ್ಷೆ ನಡೆಯಬೇಕೆಂದು ಈ ಸದನದಲ್ಲಿ ತೀರ್ಮಾನವಾದರೆ, ಆ ತರಹವೇ ನಡೆಸೋಣ. ಈಗ ಇರೋ ನೀತಿಯನ್ನು ನಾನು ಹೇಳುತ್ತಿದ್ದೇನೆ. ಹೊಸದಾಗಿ ನೀತಿ ಮಾಡುವುದಕ್ಕಾಗುತ್ತದೆಯೇ ? ನೀವೆಲ್ಲಾ ಹೇಳಿದರೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ,—ಪುಸ್ತಕವಿಲ್ಲದೆ ಹುಡುಗರನ್ನು ಪರೀಕ್ಷೆಗೆ...

ಶ್ರೀ ಎಂ. ರಘುಪತಿ.—ಪುಸ್ತಕವಿಲ್ಲದೆ ಹುಡುಗರು ಪರೀಕ್ಷೆಯಲ್ಲಿ ಪಾಸ್ ಆಗಬೇಕೆಂದಲ್ಲ. ಎಲ್ಲೋ ಸ್ವಲ್ಪ ಲೋಪದೋಷವಾಗಿದೆ. ಬರೆದು ಕಳುಹಿಸಿ ಅದನ್ನು ಸರಿ ಮಾಡುತ್ತೇನೆಂದು ಹೇಳುತ್ತಿದ್ದೇನೆ.

(ii) ಮಾಜಿ ಕಾಂಗ್ರೆಸ್ ಅಧ್ಯಕ್ಷರ ಹೇಲೆ ಹಲ್ಲೆ ನಡೆಸಿದ ನಂದಕುಮಾರ್ ಅವರ ಬಂಧನದ ಬಗ್ಗೆ.

SRI MALLIKARJUNA M. KHAGE.—I call the attention of the Minister for Home to the murder of Nandakumar who had attempted to kill the Ex-President of Pradesh Congress (I).

ದಿನಾಂಕ ೨೮-೧-೧೯೮೬ ರಂದು ರಾತ್ರಿ ಸುಮಾರು ೧೦-೩೦ ಘಂಟೆ ಸಮಯದಲ್ಲಿ ಶ್ರೀ ವಿ.ಜಿ. ಸತ್ಯಾನಂದ ಎಂಬುವರು ಶ್ರೀರಾಮಪುರ ಪೊಲೀಸ್ ಠಾಣೆಗೆ ಹೋಗಿ, ಅವನ ಸಹೋದರ ವಿ.ಜಿ. ನಂದಕುಮಾರನು ಮನೆಯೊಳನ್ನು ಮಧ್ಯಾಹ್ನ ಸುಮಾರು ೧೨-೩೦ಘಂಟೆಯಲ್ಲಿ ಬಿಟ್ಟು ಹೋದವನು ವಾಪಸ್ಸು ಬಂದಿಲ್ಲವೆಂದು ಬಾಯಿ ಮಾತಿನಲ್ಲಿ ಹೇಳಿರುವನು. ಇದರ ಬಗ್ಗೆ ಆಪರಾಧ ಸಂಖ್ಯೆ ೪೬:೮೬ರ ಪ್ರಕಾರ ಮನುಷ್ಯ ನಾಪತ್ತೆ' ಎಂದು ಗುನ್ನೆಯೊಂದನ್ನು ನೋದಾಯಿಸಿದರು. ಸದರಿ ನಾಪತ್ತೆಯಾದ ವ್ಯಕ್ತಿಯ ವಿವರಗಳನ್ನು ಕಂಟ್ರೋಲ್ ರೂಮಿಗೆ ತಿಳಿಸಿ, ಕೂಡಲೇ ಅದನ್ನು ಎಲ್ಲಾ ಪೊಲೀಸ್ ಠಾಣೆಗಳಿಗೆ

ತಿಳಿಸುವಂತೆ ಸೂಚಿಸಿದರು. ಅವುಗಳನ್ನು ದಿನನಿತ್ಯ ಆರಕ್ಷಕ ಆಯುಕ್ತರವರ ಕಛೇರಿಯಿಂದ ಹೊರಡಿಸುವ ಕ್ರೈಂ ವಾರ್ತಾ ಆಕರೆನ್ಸ್ ಷೀಟ್ ಮೂಲಕ ಸರ್‌ಕ್ಯುಲೇಟ್ ಮಾಡಲಾಯಿತು.

ದಿನಾಂಕ ೨೯-೧-೧೯೮೬ ರಂದು ಮಧ್ಯಾಹ್ನ ೩-೩೦ ಘಂಟೆಯ ಸಮಯದಲ್ಲಿ ಮೇಲ್ಕಂಡ ಅಪರಾದ ಸಂಖ್ಯೆಯಲ್ಲಿ ಫಿರ್ಯಾದುದಾರನಾದ ಸತ್ಯನಂದ ರವರು ಮತ್ತೊಂದು ದೂರನ್ನು ಕೊಟ್ಟು, ಅದರಲ್ಲಿ ತನ್ನ ಸಹೋದರ ನಂದಕುಮಾರನು ಶ್ರೀರಾಮಪುರದ ಅವನ ಮನೆಯನ್ನು ದಿನಾಂಕ ೨೮-೧-೧೯೮೬ ರಂದು ಮಧ್ಯಾಹ್ನ ಸುಮಾರು ೧೨ ಘಂಟೆ ಸಮಯದಲ್ಲಿ ಮುನಿಕಾಂತ ಎಂಬುವನ ಜೊತೆಯಲ್ಲಿ ಹೋಗಿರುವುದಾಗಿ ಹೇಳಿರುವನು. ಅದೇ ದಿನ ಸಂಜೆ ಸುಮಾರು ೪-೩೦ ಘಂಟೆ ಸಮಯದಲ್ಲಿ ವಿಜಯನಗರದ ನಿವಾಸಿ ಶಂಕರ್ ಎಂಬುವನು ಅವನ ಮನೆಗೆ ಹೋಗಿ ನಂದಕುಮಾರನು ಶೇಷಾದ್ರಿಪುರದಲ್ಲಿರುವ ನಟರಾಜ ಚಿತ್ರಮಂದಿರದ ಬಳಿ ನಿಂತಿದ್ದಾಗ ಗಣೇಶ, ಅಶ್ವತ್ಥ ಮತ್ತು ಇತರ ಇನ್ನಿಬರು ಅವನಿಗೆ ಚೂರಿಯಿಂದ ಬೆದರಿಕೆ ಹಾಕಿ ಅವನನ್ನು ಒಂದು ಆಟೋರಿಕ್ಷಾದಲ್ಲಿ ಬಲವಂತವಾಗಿ ಅಪಹರಿಸಿರುವುದಾಗಿಯೂ ಮತ್ತು ಅವನು ಎಲ್ಲಿದ್ದಾನೆಂಬ ಬಗ್ಗೆ ಗೊತ್ತಿಲ್ಲವೆಂದು ಶಂಕರನು ತಿಳಿಸಿದನೆಂದು ದೂರಿನಲ್ಲಿ ಹೇಳಿರುವನು. ಈ ದೂರಿನ ಬಗ್ಗೆ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೨೨೨/೮೬ ಕಲಂ ೩೬೨ ಭಾ.ದಂ.ಸಂ. ಪ್ರಕಾರ ಗುನ್ನೆಯೊಂದನ್ನು ನೋಂದಾಯಿಸಲಾಯಿತು. ಗಣೇಶ ಮತ್ತು ಅಶ್ವತ್ಥ ರವರನ್ನು ಪತ್ತೆ ಹಚ್ಚಲು ಸಿಬ್ಬಂದಿ ಕಳುಹಿಸಿ ಕೊಡಲಾಗಿ, ಅವರು ಅವರ ಮನೆಗಳಲ್ಲಾಗಲೀ ಅಥವಾ ಬೇರೆ ಕಡೆ ಗಳಲ್ಲಾಗಲೀ ಪತ್ತೆಯಾಗಿಲಿಲ್ಲವೆಂದು ವರದಿಯಾಗಿದೆ.

ತನಿಖೆಯಂ ವಂದುವರೆಯಂತಿದ್ದಾಗ ಬೆಂಗಳೂರು ಜಿಲ್ಲೆಯ ಹಾರೋಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುವ ತಾತಗುಣಿ ಗ್ರಾಮದ ಹತ್ತಿರವಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೇರಿದ ಸೇತುವೆ ಹತ್ತಿರ ದಿನಾಂಕ ೩೦-೧-೧೯೮೬ರಂದು ಕತ್ತಿನ ಹಿಕ್ಕಿರ ಕೊಯ್ದು ಗಾಯಗೊಂಡಿದ್ದ ಒಬ್ಬ ಪುರುಷನ ಮೃತ ದೇಹ ಇದ್ದದ್ದು ಕಂಡು ಬಂದಿತು. ಈ ಮೃತ ದೇಹವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜೂನಿಯರ್ ಇಂಜಿನೀಯರ್ ಒಬ್ಬರು ಗಮನಿಸಿ ಹಾರೋಹಳ್ಳಿ ಪೊಲೀಸ್ ಠಾಣೆಗೆ ವರದಿ ಮಾಡಿದರು. ಸದರಿ ಮೃತ ದೇಹವು ವಿ.ಜೆ. ನಂದಕುಮಾರನ ದೇಹವಾಗಿದೆಯೆಂದು ಅವನ ಸಹೋದರನು ಗುರುತಿಸಿದನು.

ಈ ಸಂಬಂಧದಲ್ಲಿ ಬೆಂಗಳೂರು ಜಿಲ್ಲೆಯ ಹಾರೋಹಳ್ಳಿ ಪೊಲೀಸ್ ಠಾಣೆಯ ಅಪರಾದ ಸಂಖ್ಯೆ. ೧೩.೮೬ ಕಲಂ ೩೦೨, ಭಾ.ದಂ.ಸಂ. ಪ್ರಕಾರ ಗುನ್ನೆಯೊಂದನ್ನು ನೊಂದಾಯಿಸಿಕೊಂಡು ತನಿಖೆಯನ್ನು ಕೈಗೊಂಡರು. ಕನಕಪುರ ವೃತ್ತ ಆರಕ್ಷಕ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ, ಶವಪರೀಕ್ಷೆ ನಡೆಸಿ ನಂತರ ಶವದ ಮೇಲಿದ್ದ ಬಟ್ಟೆಗಳನ್ನು ಅಪಾನತ್ತು ಪಡಿಸಿ, ಫೋಟೋ ತೆಗಿಸಿ ಪ್ರಚುರ ಪಡಿಸಿದ್ದರಿಂದ ಮೃತಪಟ್ಟ ವ್ಯಕ್ತಿ, ಬೆಂಗಳೂರು ನಗರದ ಶ್ರೀರಾಮಪುರದ ವಾಸಿ, ನಂದಕುಮಾರನೆಂದು ತಿಳಿದು ಬಂದಿರುತ್ತದೆ.

ಮೇಲ್ಕಂಡ ಮೃತಪಟ್ಟ ನಂದಕುಮಾರನು ಸುಮಾರು ೨೫ ವರ್ಷ ವಯಸ್ಸುಳ್ಳವನಾಗಿದ್ದು, ಗಂಗಾಧರ ನಾಯಿಡು ರವರ ಮಗನಾಗಿರುವನು. ಅವನು ಬೆಂಗಳೂರು ನಗರದ ಶ್ರೀರಾಮಪುರದ ಪಿಳ್ಳಣ್ಣ ಬ್ಲಾಕ್‌ನ ಒಂದನೇ ಕ್ರಾಸಿನಲ್ಲಿರುವ ೧೨ಳರ ಮನೆಯಲ್ಲಿ ವಾಸವಾಗಿದ್ದನು. ಅವನು ಶ್ರೀರಾಮಪುರ ಪೊಲೀಸ್ ಠಾಣೆಯಲ್ಲಿ ರೌಡಿ ಷೀಟಿನಲ್ಲಿ ದಾಖಲಾಗಿದ್ದನು. ಅವನು ಬೆಂಗಳೂರಿನ ವಿಜ್ಞಾನ ಕಾಲೇಜಿನಲ್ಲಿ ಬಿಎಸ್‌ಸಿ ತರಗತಿಯಲ್ಲಿ ಓದುತ್ತಿದ್ದಾಗ ವ್ಯಾಸಂಗವನ್ನು ಬಿಟ್ಟು ರೇಡಿಯೋ ಇಂಜಿನೀಯರಿಂಗ್ ಕೋರ್ಸ್ ಮಾಡಿದನು. ೧೯೭೭ರಲ್ಲಿ ಕೆಲವು ರೌಡಿಗಳ ಸಂಪರ್ಕ ಇಟ್ಟುಕೊಂಡಿದ್ದನೆಂ ಅಲ್ಲಿಂದೀಚೆಗೆ ೧೬ ಕ್ರಿಮಿನಲ್ ಮೊಕದ್ದಮೆ ಗಳಿಗೆ ಒಳಗಾಗಿದ್ದು, ಅವುಗಳಲ್ಲಿ ಕೆಲು ಮೊಕದ್ದಮೆಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ. ಏಳು ಮೊಕದ್ದಮೆಗಳಲ್ಲಿ ಅವನನ್ನು ಚಾಮಿನಿನ ಮೇಲೆ ಬಿಡುಗಡೆ ಮಾಡಲಾಯಿತು.

ದಿನಾಂಕ ೨೫-೯-೧೯೮೫ ರಂದು ರಾತ್ರಿ ಸುಮಾರು ೯-೪೫ ಘಂಟೆಯಲ್ಲಿ ಗಣೇಶ್ ಕುಮಾರನ ಜೊತೆಯಲ್ಲಿ ಕೆಪಿಸಿಸಿ (ಐ) ಕಛೇರಿಗೆ ಅಕ್ರಮವಾಗಿ ಪ್ರವೇಶಿಸಿ, ಕಛೇರಿಯ ಕಾವಲುಗಾರನಾದ ರಹಮಾನ್ ಖಾನನನ್ನು ಥಳಿಸಿರುವನು. ಇದರ ಬಗ್ಗೆ ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೪೩೮/೮೫ ಕಲಂ ೪೪೭, ೨೪೨, ೪೨೭ ಭಾ.ದಂ.ಸಂ. ಪ್ರಕಾರ ನಂದಕುಮಾರ್ ಮತ್ತು ಗಣೇಶ್ ಕುಮಾರನ ವಿರುದ್ಧ ಗುನ್ನೆಯೊಂದನ್ನು ನೊಂದಾಯಿಸಲಾಯಿತು ನಂದಕುಮಾರ್ ಮತ್ತು ಗಣೇಶ್

ಕುಮಾರನನ್ನು ದಸ್ತಗಿರಿ ಮಾಡಿ ತನಿಖೆಯನಂತರ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ೨ನೇ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಲಾಯಿತು. ಸದರಿ ಮೊಕದ್ದಮೆ ನ್ಯಾಯಾಲಯದ ವಿಚಾರಣೆಯಲ್ಲಿದ್ದು ಅದು ದಿನಾಂಕ ೧೩-೩-೧೯೮೬ಕ್ಕೆ ಮುಂದೂಡಲಾಗಿದೆ.

ದಿನಾಂಕ ೪-೧೦-೧೯೮೫ ರಂದು ಸುಮಾರು ಮಧ್ಯಾಹ್ನ ಮೂರು ಘಂಟೆ ಸಮಯದಲ್ಲಿ ನಂದಕುಮಾರ್, ರವಿ ಮತ್ತು ಮಹದೇವ ಉರುಫ್ ದೇವ ಎಂಬುವರೊಂದಿಗೆ ಕೆಪಿಸಿಸಿ (ಐ) ಕಚೇರಿಗೆ ಬಲವಂತವಾಗಿ ನುಗ್ಗಿದನು. ರವಿಯು ಕುಡುಗೋಲು ಹೊಂದಿದ್ದು ಕೆಪಿಸಿಸಿ (ಐ) ಮಾಜಿ ಅಧ್ಯಕ್ಷರಾದ ಕೆ.ಹೆಚ್. ರಂಗನಾಥ್ ರವರಿಗೆ ಬೆದರಿಕೆ ಹಾಕಿದ್ದನು. ಮತ್ತು ಅವರ ಕಾರಿಗೂ ಸಹ ಸಣ್ಣಪುಟ್ಟ ಹಾನಿಯುಂಟು ಮಾಡಿದ್ದನು. ಈ ಸಂಬಂಧದಲ್ಲಿ ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೪೯೦/೮೫ ಕಲಂ ೪೫೨, ೫೦೬ (ಬಿ), ೨೨೭ ರೆಡ್‌ವಿತ್ ೩೪ ಭಾ.ದಂ.ಸಂ. ಪ್ರಕಾರ ಗುನ್ನೆಯೊಂದನ್ನು ನೊಂದಾಯಿಸಲಾಯಿತು. ತನಿಖೆ ನಡೆಸುತ್ತಿದ್ದಾಗ ಮೇಲ್ಕಂಡ ಮೂವರನ್ನು ದಸ್ತಗಿರಿ ಮಾಡಲಾಯಿತು. ತನಿಖೆಯ ನಂತರ ಬೆಂಗಳೂರಿನ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ ೨, ನ್ಯಾಯಾಲಯದಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಯಿತು ಈ ಮೊಕದ್ದಮೆಯು ನ್ಯಾಯಾಲಯದ ವಿಚಾರಣೆಯಲ್ಲಿದ್ದು ದಿನಾಂಕ ೧೯-೩-೧೯೮೬ಕ್ಕೆ ಮುಂದೂಡಲಾಗಿದೆ.

ನಂದಕುಮಾರನು ತನ್ನ ಗುರುತನ್ನು ಪೊಲೀಸರು ತಿಳಿದುಕೊಂಡಿದ್ದಾರೆಂದೂ, ಅವರು ತನಗಾಗಿ ಹುಡುಕುತ್ತಿದ್ದಾರೆಂದೂ ತಿಳಿದು ಆತ್ಮಹತ್ಯೆ ಮಾಡಿಕೊಳ್ಳಲು ವಿಷ ಸೇವಿಸಿದನು. ಅವನನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ದಿನಾಂಕ ೫-೧೦-೧೯೮೫ರಂದು ಚಿಕಿತ್ಸೆಗಾಗಿ ಸಾಗಿಸಲಾಯಿತು. ಅವನನ್ನು ಆಸ್ಪತ್ರೆಗೆ ತಂದಾಗ ಪ್ರಜ್ಞೆ ಇರಲಿಲ್ಲ. ಈ ಸಂಬಂಧದಲ್ಲಿ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ ೩೪೪/೮೫ ಕಲಂ ೩೦೭ ಭಾ.ದಂ.ಸಂ. ಪ್ರಕಾರ ಗುನ್ನೆಯೊಂದನ್ನು ನೊಂದಾಯಿಸಲಾಯಿತು. ಸದರಿ ಮೊಕದ್ದಮೆಯು ತನಿಖೆಯಲ್ಲಿದ್ದು ಕೆಮಿಕಲ್ ಎಕ್ಸಾಮಿನರ್ ವರದಿಗಾಗಿ ಕಾಯಲಾಗಿದೆ.

ನಂದಕುಮಾರ್ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಯಥಾ ಕ್ರಮವಾಗಿ ಅವನನ್ನು ದಸ್ತಗಿರಿ ಮಾಡಲಾಯಿತು. ಮೇಲ್ಕಂಡ ಎರಡು ಪ್ರಕರಣಗಳಲ್ಲಿ ಪೊಲೀಸರು ಶೀಘ್ರಕ್ರಮ ತೆಗೆದುಕೊಂಡು, ದಸ್ತಗಿರಿ ಮಾಡುವುದರಲ್ಲಿ ವಿಳಂಬವಾಗಿಲ್ಲ. ಕೆಪಿಸಿಸಿ (ಐ) ಕಚೇರಿಗೆ ಮತ್ತು ನಾಜಿ ಅಧ್ಯಕ್ಷರ ಮನೆಯ ಹತ್ತಿರ ಪೊಲೀಸ್ ಬಂದೋಬಸ್ತ್ ಮತ್ತು ಕಾವಲಿನ ವ್ಯವಸ್ಥೆಯನ್ನು ಮಾಡಲಾಯಿತು.

ನಂದಕುಮಾರನಿಗೆ ಬೆದರಿಕೆ ಹಾಕಿ ತಲೆ ತಪ್ಪಿಸಿಕೊಂಡಿದ್ದ ಈ ಕೆಳಕಂಡವರನ್ನು ಈಗಾಗಲೇ ಪೋಲೀಸರು ದಿನಾಂಕ ೧೦-೨-೧೯೮೬ರ ರಾತ್ರಿ ದಸ್ತಗಿರಿ ಮಾಡಿದ್ದಾರೆ.

೧. ಆಶ್ವತ್ಥ, ೨೨ವರ್ಷ ಮುನಿಸ್ವಾಮಿಯಪ್ಪನವರ ಮಗ, ನಂ. ೧೩೭, ಗೌರಿಪೇಟೆ ಕೋಲಾರ.

೨. ಗಣೇಶ ಉ: ಗಣಪತಿ, ವಯಸ್ಸು ೨೯ ವರ್ಷ, ಅರಮೇರಿ ಗ್ರಾಮ, ವಿರಾಜಪೇಟೆ, ಕೊಡಗು ಜಿಲ್ಲೆ. (ಅಪ್ಪಯ್ಯನವರ ಮಗ)

೩. ಶಂಕರ್ ಉ: ಶಂಕರಣ್ಣ, ವಯಸ್ಸು ೩೭ವರ್ಷ, ೧೬೯, ಶೇಷಾದ್ರಿಪುರಂ ೨ನೇ ಮುಖ್ಯ ರಸ್ತೆ, ಬೆಂಗಳೂರು ನಗರ. (ಮುನಿಸ್ವಾಮಿಯವರ ಮಗ)

ಮೇಲ್ಕಂಡ ಅಪರಾಧಿಗಳನ್ನು ಪರಿಪ್ರಶ್ನಿಸಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಂದಕುಮಾರ್‌ನ್ನು ಕೆ.ಪಿ.ಸಿ.ಸಿ.(ಐ) ಅಧ್ಯಕ್ಷರ ಮೇಲೆ ಹಲ್ಲೆ ಮಾಡಿದನಂತರ ಅವನನ್ನು ಬೇಲ್ ಮೇಲೆ ಬಿಡಲಾಗಿತ್ತೋ ಅಥವಾ ಅವನಂ ಪ್ರತಿದಿವಸ ಪೋಲೀಸ್ ಠಾಣೆಗೆ ಬಂದು ಹಾಜರಾತಿ ಕೊಡಬೇಕೆಂದು ಕಂಡೀಷನ್ ಹಾಕಿ ಅವನನ್ನು ಬಿಡಲಾಗಿತ್ತೋ ಹೇಗೆ? ಅವನು ಪ್ರತಿ ದಿವಸ ಪೋಲೀಸ್ ಸ್ಟೇಷನ್‌ಗೆ ಬಂದು ಹಾಜರಾತಿ ಕೊಟ್ಟು ಹೋಗುವಂಥಾದ್ದು ಇದ್ದಿದ್ದರೆ ವಿಚಾರ ಗೊತ್ತಾಗುತ್ತಿತ್ತು. ಅವನನ್ನು ಯಾವ ಕಂಡೀಷನ್ ಮೇಲೆ ಬಿಟ್ಟಿದ್ದರು ಎನ್ನುವುದನ್ನು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಕೋರ್ಟ್‌ನಿಂದ ಬೇಲ್ ಮೇಲೆ ಬಿಡುಗಡೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವನು ರೌಡಿ ಷೀಟ್‌ನಲ್ಲಿದ್ದ, ೧೬ ಕ್ರಿಮಿನಲ್ ಮೊಕದ್ದಮೆಗೆ ಒಳಗಾಗಿದ್ದ ಎಂದು ತಾವೇ ಹೇಳುತ್ತಿದ್ದೀರಿ. ಆದ್ದರಿಂದ, ಇವನನ್ನು ಗೂಂಡಾ ಆಕ್ಟ್ ಪ್ರಕಾರ ಇಡಬಹುದಾಗಿತ್ತು. ಇಂಥ ಕೆಟ್ಟ ಪ್ರವೃತ್ತಿ ಇದ್ದವನಿಗೆ ಪೋಲೀಸ್ ಠಾಣೆಯಲ್ಲಿ ಪ್ರತಿದಿವಸ ಹಾಜರಿ ಇಡಬೇಕಾಗಿತ್ತು. ಆತನ ಮೇಲೆ ೧೬ ಮೊಕದ್ದಮೆಗಳು ಇದ್ದಮೇಲೆ ಅವನಿಗೆ ಪೋಲೀಸ್ ಠಾಣೆಯಲ್ಲಿ ಡೇಲಿ ಅಟೆಂಡೆನ್ಸ್ ಏತಕ್ಕೆ ಮಾಡಲಿಲ್ಲ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೆ, ಅದರ ಬಗ್ಗೆ ನಾನೂ ಕೇಳಿಬಿಡುತ್ತೇನೆ. ಅಟೆಂಡೆನ್ಸ್ ಪ್ರಶ್ನೆ ಹಾಕುವುದಕ್ಕೆ ಮಂಂಚಿ ಬೇರೆ ಪ್ರಶ್ನೆಗಳು ಇವೆ. ಆತ ಮೊದಲೇ ರೌಡಿ ಲಿಸ್ಟ್‌ನಲ್ಲಿದ್ದ ಎನ್ನುವುದು ತಮಗೆ ಗೊತ್ತಿದೆ. ೨೫-೯-೧೯೮೫ರಂದು ಕೆ.ಪಿ.ಸಿ.(ಐ) ಅಧ್ಯಕ್ಷರ ಮೇಲೆ ಹಲ್ಲೆ ಮಾಡಿದ್ದು ತಮ್ಮ ಗಮನಕ್ಕೆ ಬಂದಮೇಲೆ ಆತನನ್ನು ತಮ್ಮ ಗೂಂಡಾ ಕಾಯಿದೆ ಪ್ರಕಾರ ಏತಕ್ಕೆ ಇಡಲಿಲ್ಲ? ಇನ್ನು ಯಾರನ್ನು ಗೂಂಡಾ ಕಾಯಿದೆ ಪ್ರಕಾರ ಇಡುತ್ತೀರೋ ಗೊತ್ತಿಲ್ಲ. ಆತನ ಮೇಲಿದ್ದ ಬೇರೆ ಕೇಸುಗಳು ನಡೆಯುತ್ತಿದ್ದುದು ತಮಗೆ ಕಂಡುಬಂದರದ ಆತನನ್ನು ಏತಕ್ಕೆ ಸ್ಥಾನ ಬದ್ಧತೆಯಲ್ಲಿ ಇಡಲಿಕ್ಕೆ ಪ್ರಯತ್ನ ಮಾಡಲಿಲ್ಲ? ಈತ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದ ಎನ್ನುವುದನ್ನು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಿ. ಇದನ್ನು ನೋಡಿದರೆ ಯಾವುದೋ ಶಕ್ತಿಗಳು ಇವನ ಮೇಲೆ ಪ್ರಯೋಗ ಮಾಡುತ್ತಿರಬಹುದು. ಅಥವಾ ಚಿತ ಚಂಚಲ ಇರಬಹುದು. ತಮ್ಮ ಹತ್ತಿರ ಇದ್ದಂಥ ವಿಶೇಷ ಕಾನೂನು ಪ್ರಯೋಗ ಮಾಡಲಿಕ್ಕೆ ಯೋಗ್ಯವಾದ ಸಂದರ್ಭ ಇದ್ದರೂ ಸಹ ಏತಕ್ಕೆ ಹಿಂದೇಟು ಹಾಕಿದಿರಿ?

ಶ್ರೀ ಬಿ. ರಾಚಯ್ಯ.—ಹಿಂದೇಟು ಹಾಕಲಿಲ್ಲ. ಅವರ ಅಕ್ಕ ನಮಗೆ ತೊಂದರೆ ಕೊಡುತ್ತಿದ್ದಾನೆಂದು ಬೈದುದಕ್ಕೆ ವಿಷ ತೆಗೆದುಕೊಂಡು ಪ್ರಜ್ಞಾಹೀನ ಆಗಿದ್ದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿದ್ದನು. ಮೊದಲೇ ತಮಗೆ ಗೊತ್ತಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ಅವರನ್ನು ತೆಗೆದುಕೊಂಡು ಹೋಗಿ ಪೋಲೀಸ್ ಕಸ್ಟಡಿಯಲ್ಲಿಟ್ಟುಕೊಂಡರೆ, ಅಕಸ್ಮಾತ್ ತೀರಿ ಹೋದರೆ ದೊಡ್ಡ ಆರೋಪಣೆ ಬರುತ್ತಿತ್ತು ಎಂದು ಅವನು ಗುಣಮುಖನಾದ ಮೇಲೆ ಅನಂತರ ಅರೆಸ್ಟ್ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವನ ಚರಿತ್ರೆ ಬಗ್ಗೆ ಸಾಕಷ್ಟು ಗೊತ್ತಿರುವಂಥ ಸಂದರ್ಭದಲ್ಲಿ ಇಡೀ ರಾಜ್ಯದ ಗಮನ ಸೆಳೆಯುವಂಥ ಪ್ರಕರಣದಲ್ಲಿ ಈತ ಸಿಕ್ಕಿದಾಗ, ಇವನಂ ಆಸ್ಪತ್ರೆಯಿಂದ ಸುಸ್ಥಿಯಲ್ಲಿ ಬಂದಕೂಡಲೇ ಇವನನ್ನು ಗೂಂಡಾ ಕಾನೂನು ಪ್ರಕಾರ ಬಂಧಿಸಲಿಕ್ಕೆ ತೊಂದರೆ ಏನೂ ಇರಲಿಲ್ಲ. ಆ ರೀತಿ ಅವನನ್ನು ಬಂಧಿಸಿಟ್ಟಿದ್ದರೆ ಇವನ ಕೊಲೆಯೂ ಆಗುತ್ತಾ ಇರಲಿಲ್ಲ. ಅವನಂ ಮಾಡಿದಂಥ ಪ್ರಕರಣಗಳ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಲಿಕ್ಕೆ ಅವಕಾಶವಾಗುತ್ತಿತ್ತು. ತಾವು ಅಂಥ ಕೆಲಸವನ್ನು ಮಾಡದೆ, ಆತನನ್ನು ಸುಮ್ಮನೆ ರಸ್ತೆಯ ಮೇಲೆ ಬಿಟ್ಟು, ಇಡೀ ವಿಚಾರವನ್ನು ಲಘುವಾಗಿ ಪರಿಗಣಿಸುತ್ತಾ ಹೋಗಿರುವುದರಿಂದ ಕೊಲೆಯಾಗಿ ಅವನ ಇತಿಹಾಸ ಮುಕ್ತಾಯವಾಗಿದೆ. ಇದರಿಂದ ಏನಾಗುತ್ತದೆ, ಎಂದರೆ ಅವನಂ ಮಾಡಿದಂಥ ಅಪರಾಧ ಏತಕ್ಕೆ ಮಾಡಿದ್ದ ಎನ್ನುವುದಂ ಯಾವುದೂ ಬೆಳಕಿಗೆ ಬರುವುದಕ್ಕೆ ಸಾಧ್ಯವಿಲ್ಲ. ಅವನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಇದ್ದಾಗ ಅರೆಸ್ಟ್ ಮಾಡಬೇಕೆಂದು ಯಾರೂ ಹೇಳುವುದಿಲ್ಲ ಅವನು ಸುಸ್ಥಿತಿಗೆ ಬರಲಿದ ಮೇಲೆ ಗೂಂಡಾ ಕಾಯಿದೆಯಲ್ಲಿ ಇಡಲಿಕ್ಕೆ ತಮಗೆ ಏನು ತೊಂದರೆಯಿತ್ತು? ಅವನನ್ನು ತಾವು ಬಾಧನ ಮಾಡಿದಮೇಲೆ ಕೋರ್ಟ್‌ನಲ್ಲಿ ಬಿಡುಗಡೆ ಮಾಡಿದ್ದರೆ ಅದು ಬೇರೆ. ಹಾಗಾದರೆ ತಾವು ಗೂಂಡಾ ಕಾನೂನು ಏತಕ್ಕೆ ಇಟ್ಟುಕೊಂಡಿದ್ದೀರಿ.

ಶ್ರೀ ಬಿ. ರಾಚಯ್ಯ.—ಗೂಂಡಾ ಕಾನೂನು ಪ್ರಕಾರ ಎಲ್ಲಾ ರೆಕಾರ್ಡ್ಸ್ ಬಿಲ್ಡ್‌ಅಪ್ ಮಾಡಬೇಕಿದಿರಂವಾಗ ಅಷ್ಟರಲ್ಲಿ ಇಂಥ ಒಂದು ಇನ್ಸಿಡೆಂಟ್ ಆಯಿತು. ಅವನನ್ನು ಹಿಡಿಯಲಿಕ್ಕೆ ಪ್ರಯತ್ನಪಟ್ಟಾಗ ವಿಷ ತೆಗೆದುಕೊಂಡು ಆಸ್ಪತ್ರೆಯಲ್ಲಿ ಸೇರಿಕೊಂಡಿದ್ದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವನು ವಿಷ ತೆಗೆದುಕೊಂಡು ಆನಂತರ ಚೆನ್ನಾಗಿ ಆದಮೇಲೆ ಆತನ ಮರ್ಡರ್ ಆಗಿದೆ. ಆತ ಗುಣಮುಖನಾಗಿ ಆದಮೇಲೆ ಮರ್ಡರ್ ಆಗಿದೆ. ತಮಗೆ ಗೊತ್ತಿರುವ ಹಾಗೆ ೧೯೭೭ರ ನಂತರ ೧೬ ಕ್ರಿಮಿನಲ್ ಕೇಸ್‌ನಲ್ಲಿ ಈತ ದಾಖಲಾಗಿದ್ದ ಎಂದು ಹೇಳಿದ್ದೀರಿ. ತಾವು ೧೬ ಕೇಸ್‌ನಲ್ಲಿ ಇದ್ದಂಥನನ್ನೇ ಗೂಂಡಾ ಕಾಯಿದೆಯಲ್ಲಿ ಇಡಲಿಲ್ಲ ಎಂದರೆ ಇನ್ನು ಯಾರನ್ನು ಇಡುತ್ತೀರಿ?

ಶ್ರೀ ಬಿ. ರಾಚಯ್ಯ.—ಗೂಂಡಾ ಆಕ್ಟ್ ಪ್ರಕಾರ ಇವನ ಮೇಲೆ ಕೇಸ್ ಬಿಲ್ಡ್ ಅಪ್ ಮಾಡುತ್ತಿದ್ದರಂ ಅಷ್ಟರಲ್ಲಿ ಈ ರೀತಿಯಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆತ ೧೯೭೭ರಿಂದಲೇ ರೌಡಿ ಸಂಪರ್ಕ ಇಟ್ಟುಕೊಂಡಿದ್ದ ಎನ್ನುವುದನ್ನು ಹೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—ಕಾಂಗ್ರೆಸ್ ಅಧ್ಯಕ್ಷರ ಮೇಲೆ ಇನ್ಸ್‌ಪಿಡೆಂಟ್ ಆದತಕ್ಷಣ ಆತನನ್ನು ಹಿಡಿಯಲಿಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಿದೆವು. ಆ ಸಂದರ್ಭದಲ್ಲಿ ಅವರ ಅಕ್ಕ ಬೈದರು ಎಂದು ವಿಷ ತೆಗೆದುಕೊಂಡರೆ ಎಂದು ಹೇಳಿಕೆ ಕೊಟ್ಟಿದ್ದಾನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ಕೇಳುತ್ತಿರುವ ಪ್ರಶ್ನೆ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಹಲ್ಲೆ ಮಾಡುವುದಕ್ಕಿಂತ ಮುಂಚಿತವಾಗಿ ಇವನು ಗೂಂಡಾ ಎನ್ನುವುದು ನಿಮ್ಮ ಇಲಾಖೆಗೆ ಸಂಪೂರ್ಣ ಗೊತ್ತಿರತಕ್ಕ ವಿಚಾರ. ಈತ ಮೊದಲನೆಯ ಬಾರಿ ಪ್ರದೇಶ ಕಾಂಗ್ರೆಸ್ ಕಛೇರಿಗೆ ಬಂದು ಆಲ್ಲಿರತಕ್ಕ ಜವಾನನ ಮೇಲೆ ಹಲ್ಲೆ ಮಾಡಿದಾಗಲೇ ಆತನನ್ನು ಗೂಂಡಾ ಆಕ್ಟ್ ಪೇಲೆ ಬಂಧಿಸಲಿಕ್ಕೆ ಏನೂ ತೊಂದರೆ ಇರಲಿಲ್ಲ. ನೀವು ಆತನನ್ನು ಬಂಧಿಸಿ ಕೋರ್ಟಿನಲ್ಲಿ ಬಿಡುಗಡೆ ಆಗಿದ್ದರೆ ನಿಮ್ಮ ಮೇಲೆ ಜವಾಬ್ದಾರಿ ಇರುತ್ತಾ ಇರಲಿಲ್ಲ. ಆತ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿದ ಮೇಲೆ ವಿಷ ತೆಗೆದುಕೊಂಡ ಎಂದೂ ಹೇಳುತ್ತಾರೆ, ಇನ್ನು ಕೆಲವರು ವಿಷ ಕೊಟ್ಟರು ಎಂದು ಹೇಳುತ್ತಾರೆ. ಅದೆಲ್ಲಾ ಬೇಕಾಗಿಲ್ಲ. ಅವನು ಉಷಾರ್ ಆದಮೇಲೆ, ಅವನು ಸುಸ್ಥಿತಿಗೆ ಮರಳಿದ ಮೇಲೆ ರೆಕಾರ್ಡ್ ಬಿಲ್ಡ್‌ಅಪ್ ಮಾಡಲಿಕ್ಕೆ ಎಷ್ಟು ಸಮಯ ಬೇಕು? ಹೊಸದಾಗಿ ಸೃಷ್ಟಿ ಮಾಡಬೇಕೆಂದರೂ ಸಾಕಷ್ಟು ರೆಕಾರ್ಡ್ ಪೋಲೀಸ್ ಇಲಾಖೆಯಲ್ಲಿ ಇರುತ್ತದೆ. ಗೂಂಡಾ ಕಾನೂನು ವಿಶೇಷ ಸಂದರ್ಭದಲ್ಲಿ ನಿರ್ವಹಿಸುವುದಕ್ಕೋಸ್ಕರ ಕೊಟ್ಟಿರುವುದು. ಆ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ವರ್ಷಾನುಗಟ್ಟಲೆ ತಮಗೆ ಸಮಯ ಬೇಕಾದರೆ ಈ ಕಾನೂನು ಇದ್ದು ಏನು ಪ್ರಯೋಜನ?

ಶ್ರೀ ಬಿ ರಾಚಯ್ಯ.—ಈತನ ಮೇಲೆ ಯಾವುದೋ ಪ್ರಕರಣಗಳು ಕೋರ್ಟಿನಲ್ಲಿ ವಿಚಾರಣೆ ಯಲ್ಲಿದ್ದುದರಿಂದ, ಕೋರ್ಟಿನಲ್ಲಿಯೇ ಶಿಕ್ಷಾರ್ಹನಾಗುತ್ತದೆಂದು ಪೋಲೀಸರು ನಿರೀಕ್ಷಣೆ ಮಾಡಿ ಕೊಂಡಿದ್ದರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲಾ ಗೂಂಡಾಗಳದ್ದು ಒಂದಲ್ಲ ಒಂದು ಕೇಸ್ ಕೋರ್ಟಿನಲ್ಲಿ ಇದ್ದೇ ಇರುತ್ತದೆ.

ಶ್ರೀ.ಬಿ. ರಾಚಯ್ಯ.—ಇದಕ್ಕಿಂತಲೂ ಮುಂಚಿತವಾಗಿ ಕೆಲವು ಗೂಂಡಾಗಳನ್ನು ಗೂಂಡಾ ಆಕ್ಟ್ ಪ್ರಕಾರ ಹಿಡಿದಿದ್ದಾಗ ಕೆಲವರು ಕೋರ್ಟಿಗೆ ಹೋಗಿ ಬಿಡುಗಡೆಯಾದರು. ಆದ್ದೆಸರಿ ಕಮಿಟಿಯವರಂ ಕೂಡ ಕೆಲವರನ್ನು ಬಿಡುಗಡೆ ಮಾಡಬೇಕೆಂದು ಹೇಳಿದರು. ಯಾವ ಯಾವ ಸೆಕ್ಷನ್ ಪ್ರಕಾರ ಯಾವ ರೀತಿ ಮಾಡಬೇಕೆಂದು ಇರುವಾಗಲೇ ಇದು ಕೋರ್ಟಿನಲ್ಲಿರುವುದರಿಂದ ಕೋರ್ಟಿನಲ್ಲಿಯೇ ಶಿಕ್ಷಾರ್ಹನಾಗಿ ಆತನಿಗೆ ಅಲ್ಲಿಯೇ ಶಿಕ್ಷೆ ಆಗುತ್ತದೆ ಎನ್ನುವ ವಿಶ್ವಾಸ ನಮ್ಮ ಅಧಿಕಾರಿಗಳಿಗೆ ಇತ್ತು.

೨-೩೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಇನ್ನೂ ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ನನಗೆ ಅವಕಾಶ ಮಾಡಿಕೊಡಿ. ಮಾನ್ಯ ಸಚಿವರು ಉಗಳಿ ನುಂಗಿ ಉತ್ತರ ಹೇಳುತ್ತಿದ್ದಾರೆ. ಮಾನ್ಯ ಕೆ.ಹೆಚ್. ರಂಗನಾಥ್ ಅವರ ಮೇಲೆ ಹಲ್ಲೆಯು ಪ್ರಕರಣವನ್ನು ತನಿಖೆ ಮಾಡಲು ಏನಾದರೂ ತೊಂದರೆ ಇದೆಯೇ? ಅಥವಾ ನಂದಕುಮಾರ್ ಎನ್ನುವವನ ಜೊತೆಯಲ್ಲಿ ಯಾರಾನ್ನಾದರೂ ಅರೆಸ್ಟ್ ಮಾಡಿದ್ದಾರೆಯೇ? ಅಥವಾ ಇದನ್ನು ಸಪ್ರೆಸ್ ಮಾಡಲು ಈ ತರಹ ಉತ್ತರ ಹೇಳುತ್ತಿದ್ದಾರೆಯೇ? ಇದನ್ನೆಲ್ಲಾ ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ನಂದಕುಮಾರ್ ಕೊಟ್ಟಿರತಕ್ಕಂಥ ಹೇಳಿಕೆಯನ್ನು ತಾವು ಅಪ್ಪಣೆ ಕೊಟ್ಟರೆ ಓದುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬೇಡ...ಮುಂದಿನ ವಿಷಯಕ್ಕೆ ಹೋಗೋಣ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಈಗ ಮುಂದಿನ ವಿಷಯಕ್ಕೆ ಹೋಗೋಣ.

(ಗೊಂದಲ)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಸದನ ನಡೆಯುವುದು ಸರಿಯಲ್ಲ. ತಾವು ಅವಕಾಶ ಕೊಡಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು.—ಇಲ್ಲ. ನಾನು ಈಗಾಗಲೇ ಮುಂದಿನ ವಿಷಯಕ್ಕೆ ಹೋಗಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಗೃಹ ಸಚಿವರು ಹೇಳಿಕೆ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಅದಕ್ಕೆ ಅವಕಾಶ ಮಾಡಿ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಈಗ ಶಿಷ್ಟಾಚಾರದ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ವಿಷಯ ಇನ್ನೂ ಮುಂಗಿಯಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ನಂದಕುಮಾರ್ ಹೇಳಿಕೆಯನ್ನು ಓದುತ್ತೇನೆಂದು ಹೇಳಿದ್ದಾರೆ. ನನ್ನ ಗಮನ ಸೆಳೆಯುವ ಸೂಚನೆಗೆ ಸಂಪರ್ಕವಾಗಿ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಾನು ಈಗಾಗಲೇ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.—ಸರ್ಕಾರದಿಂದ ಸ್ಪಷ್ಟವಾಗಿ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನೀವೆಲ್ಲರೂ ಹೀಗೆ ಒಟ್ಟಿಗೆ ನಿಂತು ಮಾತನಾಡಿದರೆ, ಮಾತನಾಡಿದ್ದು ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಬಹಳ ಗಂಭೀರವಾದ ವಿಚಾರ, ನೀವು ಅವಕಾಶ ಕೊಡಲೇಬೇಕು.

ಅಧ್ಯಕ್ಷರು.—ಮತ್ತೊಂದು ಗಮನ ಸೆಳೆಯುವ ಸೂಚನೆಯನ್ನು ಕರೆಯಿಸಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮತ್ತೊಂದನ್ನು ಹೇಗೆ ಕಳುಹಿಸಲು ಆಗುತ್ತದೆ? ಒಂದು ಸಲ ಚರ್ಚೆಯಾದ ಮೇಲೆ, ಅದೇ ವಿಷಯವನ್ನು ಚರ್ಚೆ ಮಾಡಬಹುದೇ ?

ಅಧ್ಯಕ್ಷರು.—ಬೇಕಿದ್ದರೆ. ಇದರ ಮೇಲೆ ಮತ್ತೆ ಪ್ರಶ್ನೆ ಹಾಕಿ. ತಾವು ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳಿಕೆ ಕೊಡುತ್ತೇನೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ

(ಗೊಂದಲ)

ಶ್ರೀ ಬಿ. ರಾಚಯ್ಯ.—ನಂದಕುಮಾರ್‌ನ ಹೇಳಿಕೆ ನನ್ನ ಬಳಿ ಇದೆ. ಅರೆಸ್ಟ್ ಮಾಡಿದ ಮೇಲೆ ಅವನು ಹೇಳಿಕೆ ಕೊಟ್ಟಿದ್ದಾನೆ. ತಾವು ಅಪ್ಪಣೆ ಕೊಟ್ಟರೆ, ನಾನು ಓದುತ್ತೇನೆ. ನಿನ್ನ ೩ ಜನರನ್ನು ಅರೆಸ್ಟ್ ಮಾಡಲಾಗಿದೆ. ಅವರೂ ಹೇಳಿಕೆ ಕೊಟ್ಟ ನಂತರ, ಎರಡನ್ನೂ ಸೇರಿಸಿ, ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೦ನೇ ತಾರೀಖಿನ ದಿವಸ ಅವನ ಕೊಲೆಯಾಯಿತು. ನಿನ್ನೆ ಅರೆಸ್ಟ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಎಲ್ಲರೂ ಸತ್ತ ಮೇಲೆ ಇವರು ಅರೆಸ್ಟ್ ಮಾಡುತ್ತಾರೆಯೇ ?

ಶ್ರೀ ಕೆ. ಪೆಚ್. ಶ್ರೀನಿವಾಸ್— ಇನ್‌ಮೆಸ್ಟಿಗೇಷನ್‌ಗೆ ತೊಂದರೆಯಾಗುವುದಾದರೆ, ತಾವು ಆ ರೀತಿ ಹೇಳಿ ನಾವು ಸುಮ್ಮನೇ ಕುಳಿತುಕೊಳ್ಳುತ್ತೇವೆ. ಇನ್‌ಮೆಸ್ಟಿಗೇಷನ್‌ಗೆ ಬಾಧಕವಾಗುವುದಾದರೆ, ನಾವೇನೂ ತಮ್ಮನ್ನು ಒತ್ತಾಯ ಮಾಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ಇನ್‌ಮೆಸ್ಟಿಗೇಷನ್‌ಗೆ ಸಹಾಯವಾಗಲಿ. ನಂದಕುಮಾರ್‌ನ ಸ್ಟೇಟ್‌ಮೆಂಟ್ ಇದೆ. ಮತ್ತೆ ಕೆಲವರನ್ನು ನಿನ್ನೆ ತಾನೇ ಹಿಡಿದಿದ್ದೇವೆ. ಅವರ ಹೇಳಿಕೆಗಳನ್ನು ಪಡೆದ ನಂತರ, ಎಲ್ಲವನ್ನೂ ಒಟ್ಟಿಗೇ ಸೇರಿಸಿ ಹೇಳಿಕೆ ಕೊಡುತ್ತೇನೆ.

## ನಿಯಮ 334ರ ಮೇರೆಗೆ

## ಜಿಲ್ಲಾ ಅಭಿವೃದ್ಧಿ ಮಂಡಲಿಯಂ ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಅವಕಾಶವಿಲ್ಲದಿರುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಸಮೀಕ್ಷೆಯನ್ನು ಪರಿಶೀಲಿಸಿ ಸಲಹೆ ಕೊಡುವುದಕ್ಕಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಅಭಿವೃದ್ಧಿ ಮಂಡಲಿಯ ಸಭೆ ಸೇರುವುದು ಪಾಡಿಕೆಯಂತೆ ನಡೆದುಕೊಂಡು ಬಂದಿದೆ. ಈ ತ್ರೈಮಾಸಿಕ ಸಭೆಯಲ್ಲಿ ಜಿಲ್ಲೆಯ ಅಧಿಕಾರಿಗಳು, ಸಂಸತ್ ಸದಸ್ಯರು, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು ಪಾಲ್ಗೊಳ್ಳುವರು.

ಈ ಸಭೆಗೆ ಹಲವಾರು ಜಿಲ್ಲೆಗಳಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಅವಕಾಶವಿಲ್ಲದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಲೋಕಸಭೆ, ವಿಧಾನಮಂಡಲಗಳಂತಹ ರಾಷ್ಟ್ರದ ಹಾಗೂ ರಾಜ್ಯದ ಸಾರ್ವಭೌಮ ಸಭೆಗಳಿಗೆ ಪತ್ರಕರ್ತರಿಗೆ ಮುಕ್ತವಾದ ಪ್ರವೇಶವಿದೆ. ಅಲ್ಲಿ ನಡೆಯುವ ಕಲಾಪಗಳ ವರದಿಯನ್ನು ಪತ್ರಿಕೆಗಳು, ನಿರ್ಭಯವಾಗಿ ಪ್ರಕಟ ಮಾಡುತ್ತಾ ಬಂದಿವೆ. ಜಿಲ್ಲೆಯ ಅಭಿವೃದ್ಧಿ ಕಾರಿತು ನಡೆಯುವ ಸಭೆಗಳ ವರದಿ ಜನತೆಗೆ ತಿಳಿಯಬೇಕಾದರೆ, ಪತ್ರಿಕಾ ಮಾಧ್ಯಮವೊಂದೇ ಏಕೈಕ ಮಾರ್ಗ ಅಧಿಕಾರಿಗಳು ಯಾವುದೋ ಸಂಶಯಕ್ಕೊಳಗಾಗಿ ಈ ಸಭೆಯಲ್ಲಿ ಪತ್ರಿಕಾ ವರದಿಗಾರರು ಕುಳಿತುಕೊಳ್ಳಲು ಅವಕಾಶ ನೀಡುತ್ತಿಲ್ಲವೆಂದು ತಿಳಿದುಬಂದಿದೆ.

ಪತ್ರಿಕಾ ವರದಿಗಾರರಿಗೆ ಈ ಸಭೆಯಲ್ಲಿ ಅವಕಾಶವಿಲ್ಲವಾದರೆ, ತಾವು ಸರ್ಕಾರಿ ಸುದ್ದಿಗಳನ್ನೆಲ್ಲಾ ಬಹಿಷ್ಕರಿಸುವುದಾಗಿ ಕೆಲವು ಜಿಲ್ಲೆಯ ವರದಿಗಾರರು ಬೆದರಿಕೆ ಹಾಕಿದ್ದಾರೆ. ಅವರ ಈ ಬೆದರಿಕೆಯಲ್ಲಿ ಒಂದು ಅರ್ಥವಿದೆಯೆಂದು ನನ್ನ ಭಾವನೆ. ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಪತ್ರಕರ್ತರಿಗೆ ಅವಕಾಶ ನೀಡದಿರುವುದು ಪತ್ರಿಕಾ ಸ್ವಾತಂತ್ರ್ಯಕ್ಕಾಗುವ ಧಕ್ಕೆಯೆಂದೇ ನಾನು ಹೇಳಬೇಕಾಗುತ್ತದೆ. ಇನ್ನು ಮಂಡಲಿಯಾದರೂ, ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಪತ್ರಕರ್ತರಿಗೆ ಮುಕ್ತ ಅವಕಾಶ ನೀಡಬೇಕೆಂದೂ ಈ ವಿಷಯದ ಕುರಿತು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ಜರೂರು ಆದೇಶವನ್ನು ನೀಡಬೇಕೆಂದೂ ನಾನು ತಮ್ಮ ಮೂಲಕ ಅಭಿವೃದ್ಧಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಪಂಚಾಯತ್ ಮತ್ತು ಗ್ರಾಮಿಣಾಭಿವೃದ್ಧಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಸದಸ್ಯರು ಈ ಸಭೆಯ ಗಮನಕ್ಕೆ ತಂದಂತಹ ವಿಷಯದ ಬಗ್ಗೆ ಜಿಲ್ಲಾ ಅಭಿವೃದ್ಧಿ ಮಂಡಳಿಗಳ ಸಭೆಗೆ ಇಲ್ಲಿಯವರೆಗೆ ಅದಕ್ಕೆ ಸಂಬಂಧಪಟ್ಟಂತೆ ಶಾಸಕರು ಭಾಗವಹಿಸಬಾರದು ಎಂಬ ನಿರ್ಬಂಧವೇನೋ ಕಾನೂನು ಪುಸ್ತಕಟ್ಟಿನಲ್ಲಿ ಇಲ್ಲ. ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವುದರಿಂದ, ಕೆಲವರು ಆಹ್ವಾನಿತರಲ್ಲದ ವ್ಯಕ್ತಿಗಳಿಗೆ ಸಂದರ್ಭಕ್ಕನುಗುಣವಾಗಿ ತಕ್ಕಮಟ್ಟಿಗೆ ನಿರ್ಬಂಧ ಮಾಡಲು ಅವರಿಗೆ ಅವಕಾಶ ಉಂಟು. ಆದರೆ ನಿಯಮಾವಳಿಗಳು ಸ್ಪಷ್ಟವಾಗಿರುವುದರಿಂದ, ಹೊಸ ನಿಯಮಾವಳಿಗಳ ಅವಶ್ಯಕತೆ ಇಲ್ಲ. ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.